ವಿಷಯ : ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗ ಕುರಿತು.

1425 (1997)-ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ) : ಮಾನ್ಯ ಸಮಾಜ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) 1956ರಲ್ಲಿ ರಾಜ್ಯದಲ್ಲಿ ಇದ್ದ ಪರಿಶಿಷ್ಟ ಜಾತಿ:ಪರಿಷ್ಟ ಜನಾಂಗದ ಯಾದಿಯಲ್ಲಿ ಇದ್ದ ಜಾತಿಗಳ ಸಂಖ್ಯೆ ಎಷ್ಟು (ಜಿಲ್ಲಾವಾರು)

ಆ) 1977ರ ನಂತರ ತಯಾರಿಸಿದ ಯಾದಿಯಲ್ಲಿ ಹೆಚ್ಚುವರಿ ಸೇರಿಸಿದ ಜಾತಿಗಳ ಸಂಖ್ಯೆ: ಎಷ್ಟು?

ಇ) 1956ರಲ್ಲಿ ರಾಜ್ಯದಲ್ಲಿ ಇದ್ದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗದವರ ಒಟ್ಟು ಜನಸಂಖ್ಯೆ ಎಷ್ಟು?

ಈ) 1991ರಲ್ಲಿ ನಂತರ ರಾಜ್ಯದಲ್ಲಿ ಇರುವ ಒಟ್ಟು ಜನಸಂಖ್ಯೆ ಎಷ್ಟು?

ಉ) ಜನಸಂಖ್ಯೆ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಊ)ಹಾಗಿದ್ದಲ್ಲಿ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಋ) ಈಗಾಗಲೇ ಹೆಚ್ಚಿಸಲು ಸರ್ಕಾರ ಕ್ರಮ ಕೈಗೊಳ್ಳದಿದ್ದಲ್ಲಿ, ಈಗಲಾದರೂ ಹೆಚ್ಚಿಸಲು ಸಿದ್ದವಿವಿದೆಯೇ?

ಋಾ) ಹಾಗಿದ್ದಲ್ಲಿ ಎಷ್ಟು ದಿನಗಳಲ್ಲಿ ಆದೇಶ ಹೊರಡಿಸಲು ವ್ಯವಸ್ಥೆ ಮಾಡಲಾಗುವುದು?

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಸಚಿವರು)

ಅ) 1956ರಲ್ಲಿ ಪ.ಜಾತಿ.ಪ.ವರ್ಗದವರನ್ನು ರಾಜ್ಯದಲ್ಲಿ ಪ್ರಾಂತ್ಯವಾರು ಆಧಾರದ ಮೇಲೆ ವರ್ಗೀಕರಿಸಲಾಗಿತ್ತು ಸದರಿ ಪಟ್ಟಿಯಲ್ಲಿ ಸೂಚಿಸಿರುವ ಪ.ಜಾತಿ:ಪ.ವರ್ಗಗಳ ಜಿಲ್ಲಾವಾರು ವಿವರಗಳನ್ನು ಅನುಬಂಧ 'ಎ'ನಲ್ಲಿ ಲಗತ್ತಿಸಿದೆ.

ಆ) ಕೇಂದ್ರ ಸರ್ಕಾರವು ದಿನಾಂಕ :15-10-79ರಂದು ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿನ ಕ್ರಮ ಸಂಖ್ಯೆ:17,23,53 ಮತ್ತು 54ಕ್ಕೆ13 ಪರ್ಯಾಯ ಜಾತಿಗಳನ್ನು ಸೇರಿಸಿದೆ.ಮತ್ತೆ ದಿನಾಂಕ:19-4-91ರಂದು ಪರಿಶಿಷ್ಟ ವರ್ಗದ ಪಟ್ಟಿಯಲ್ಲಿನ ಕ್ರಮ ಸಂಖ್ಯೆ :38ಕ್ಕೆ 5 ಪರ್ಯಾಯ ಜಾತಿಗಳನ್ನು ಸೇರಿಸಿದೆ.

ಇ) 1956ರಲ್ಲಿ (1951ರ ಜನಗಣತಿ ಆಧಾರದ ಮೇಲೆ) ಮೈಸೂರು ರಾಜ್ಯದಲ್ಲಿ ಪ.ಜಾತಿ:ಪ.ಜನಾಂಗದವರ ಒಟ್ಟು ಜನಸಂಖ್ಯೆ ಈ ಕೆಳಕಂಡಂತಿದೆ.

ಪ.ಜಾತಿ	16,08,821
ಪ.ವರ್ಗ	15,310

ಈ) 1991ರ ನಂತರ ರಾಜ್ಯದಲ್ಲಿರುವ ಒಟ್ಟು ಜನಸಂಖ್ಯೆ:

ಉ) ಬಂದಿದೆ

ಊ)ಸರ್ಕಾರವು ತನ್ನ ಆದೇಶ ಸಂಖ್ಯೆ :ಸಕಇ 180 ಎಸ್ಎಡಿ 94 ದಿನಾಂಕ:20-4-94ರಂದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಕ್ರಮವಾಗಿ ಶೇಕಡ 15ರಿಂದ 18ಕ್ಕೆ ಮತ್ತು ಶೇಕಡ 3ರಿಂದ5ಕ್ಕೆ ಮಿಸಲಾತಿಯನ್ನು ಏರಿಸಲಾಗಿತ್ತು. ಆದರೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗಗಳನ್ನೋಳಗೊಂಡಂತೆ ಇತರೆ ಹಿಂದುಳಿದ ವರ್ಗಗಳಿಗೆ ಮಿಸಲಾತಿ ಪ್ರಮಾಣವನ್ನು ಶೇಕಡಾ 50ಕ್ಕೆ ನಿಗಧಿಪಡಿಸಿದ್ದು ಆದರಂತೆ ಆದೇಶ ಸಂಖ್ಯೆ:ಸಕಇ 150 ಬಿಸಿಎ 94, ದಿನಾಂಕ:17-9-94ರಲ್ಲಿ ಪರಿಶಿಷ್ಟ ಜಾತಿಗೆ ಶೇಕಡಾ 15 ಮತ್ತು ಪರಿಶಿಷ್ಟ ವರ್ಗಕ್ಕೆ ಶೇಕಡಾ 3ರಂತೆ ಮಿಸಲಾತಿಯನ್ನು ನಿಗದಿಪಡಿಸಲಾಗಿದೆ.

ಋ) ಉದ್ಭವಿಸುವುದಿಲ್ಲ

ಋೂ) ಉದ್ಭವಿಸುವುದಿಲ್ಲ

ವಿಧಾನ ಸಭಾ ಪ್ರಶ್ನೆ ಸಂಖ್ಯೆ 1997ಕ್ಕೆ ಅನುಬಂಧ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಪ.ಜಾತಿ		ಪ.ವರ್ಗ	
1.	ಬೆಂಗಳೂರು	15		9	
2.	ಕೋಲಾರ	15		9	
3.	ಚಿತ್ರದುರ್ಗ	15		9	
4.	ಶಿವಮೊಗ್ಗ	15		9	
5.	ತುಮಕೂರು	15		9	
6.	ಅ) ಮೈಸೂರು (ಕೊಳ್ಳೇಗಾಲ ತಾ:ಹೊರತುಪಡಿಸಿ	15	69	9	32
	ಆ) ಕೊಳ್ಳೇಗಾಲ ತಾಲ್ಲೂಕು ಮೈಸೂರು	54		23	
7.	ಕೊಡಗು	12		6	
8.	ಮಂಡ್ಯ	15		9	
9.	ಹಾಸನ	15		9	
10.	ಚಿಕ್ಕಮಗಳೂರು	15		9	
11.	ದಕ್ಷಿಣ ಕನ್ನಡ	56		23	
12.	ಗುಲ್ಬರ್ಗ	32		5	
13.	ಬೀದರ್	32		5	
14.	ರಾಯಚೂರು	32		5	
15.	ಬಳ್ಳಾರಿ	15		9	
16.	ಬೆಳಗಾಂ	24		19	
17.	ಧಾರವಾಡ	24		19	
18.	ಬಿಜಾಪುರ	24		19	
19.	ಕೆನರಾ ಜಿಲ್ಲೆ (ಉತ್ತರ ಕನ್ನಡ)	25		19	